ಓಸ್ಸಾಟ್ ಸಂಸ್ಥೆಯ ಕಾರ್ಯ ಶ್ಲಾಘನಾರ್ಹ

ಶಾಸಕ ಸಮೃದ್ಧಿ ವಿ.ಮಂಜುನಾಥ್ ಅಭಿಮತ | ಡಿವಿಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಲೋಕಾರ್ಪಣೆ

• **ಕನ್ನಡಪ್ರಭ ವಾರ್ತೆ** ಮುಳಬಾಗಿಲು

ಹಣವಂತರು ಪ್ರಪಂಚದ ಎಲ್ಲಾ ಕಡೆ ಸಿಗುತ್ತಾರೆ. ಸಂಪತ್ತು ಇದ್ದು ದಾನ ಮಾಡುವವರ ಸಂಖ್ಯೆ ಕಡಿಮೆ ಇದೆ ಇಂತಹ ಸಮಯದಲ್ಲಿ ಅನಿವಾಸಿ ಭಾರತೀಯರು ಓಸ್ಸಾಟ್ ಸಂಸ್ಥೆಯನ್ನು ಅಮೇರಿಕಾದಲ್ಲಿ ಸ್ಥಾಪನೆ ಮಾಡಿ ದೇಶದಲ್ಲಿ ಓಸ್ಸಾಟ್ ಶೈಕ್ಷಣಿಕ ಧರ್ಮದತ್ತಿ ಮೂಲಕ ಸರ್ಕಾರಿ ಶಾಲೆಗಳನ್ನು ಸುಸಜ್ಜಿತವಾಗಿ ಕಟ್ಟುವ ಕಾಯಕದಲ್ಲಿ ತೊಡಗಿರುವುದು ಶ್ಲಾಘನೀಯ ಎಂದು ಶಾಸಕ ಸಮೃದ್ಧಿ ವಿ. ಮಂಜುನಾಥ್ ಅಭಿಮತ ವ್ಯಕ್ತಪಡಿಸಿದರು.

ಮುಳಬಾಗಿಲು ನಗರದ ಕುಂಬಾರಪಾಳ್ಯ ಸರ್ಕಾರಿ ಡಿವಿಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓಸ್ಸಾಟ್ ಸಂಸ್ಥೆಯವರು ನಿರ್ಮಿಸಿರುವ 2 ಕೋಟಿ 45 ಲಕ್ಷ ವೆಚ್ಚದ ಆಧುನಿಕ ಸೌಲಭ್ಯವುಳ್ಳ ಸುಸಜ್ಜಿತ ಶಾಲಾ ಕಟ್ಟಡವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಊರಿಗೊಂದು ಶಾಲೆ ಇರಬೇಕು. ಆದರೆ ಬಹುತೇಕ ಶಾಲೆಗಳು ಶಿಥಿಲಾವ್ಯವಸ್ಥೆ ತಲುಪಿ ಮೂಲಭೂತ ಸೌಲಭ್ಯಗಳು ವಂಚಿತವಾಗಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ವಿದ್ಯಾಭ್ಯಾಸಕ್ಕೆ ಪೂರಕ ವಾತಾವರಣ ಇಲ್ಲದಿರುವುದೇ ಕಾರಣವಾಗಿದೆ, ರಾಜಕೀಯ ಅಧಿಕಾರದ ಆಸೆಗಾಗಿ ಬಿಟ್ಟಿಭಾಗ್ಯಗಳನ್ನು ನೀಡುವ ಮೂಲಕ ಅಗತ್ಯ ಸೌಲಭ್ಯಗಳು ಇಲ್ಲವಾಗಿದೆ, ಈ ಮಧ್ಯೆಯೂ ಇಂತಹ ಸಂಸ್ಥೆಗಳು ಸರ್ಕಾರಿ ಶಾಲೆಗಳ ಪುನರ್ ನಿರ್ಮಾಣ ಕಾರ್ಯದಲ್ಲಿ ತೊಡಗುವ ಮೂಲಕ ದೇಶದ ಶೈಕ್ಷಣಿಕ ವ್ಯವಸ್ಥೆಗೆ ಭದ್ರ ಅಡಿಪಾಯ ಹಾಕುತ್ತಿದ್ದು ನಾವು ಸದುಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿದರು.

ಕೋಲಾರ ಜಿಲ್ಲಾಧಿಕಾರಿ ಆಕ್ರಂಪಾಷ ಮಾತನಾಡಿ, ಓಸಾಟ್ ಮಾದರಿಯಲ್ಲಿ ಎಲ್ಲರೂ ವಿದ್ಯಾಭ್ಯಾಸ ಹಾಗೂ ಶಾಲೆಯ ಅಭಿವೃದ್ಧಿಗೆ ಶ್ರಮಿಸಿದರೆ ಎಲ್ಲಾ ಸರ್ಕಾರಿ ಶಾಲೆಗಳು ಉತ್ತಮ ಸೌಲಭ್ಯಗಳೊಂದಿಗೆ ಗುಣಮಟ್ಟದ ಶಿಕ್ಷಣ ನೀಡಬಹುದೆಂದರು.

ಖ್ಯಾತ ಚಲನಚಿತ್ರ ನಟ ರಮೇಶ್ ಅರವಿಂದ್ ಮಾತನಾಡಿ, ಟಿವಿ ಷೋನ ಹಾಟ್‌ಸೀಟ್‌ನಲ್ಲಿ ಸಾಹಿತ್ಯ ದಿಗ್ಗಜ ಡಿ.ವಿ.ಗುಂಡಪ್ಪರನ್ನು ಕೂರಿಸಿ ಡಿವಿಜಿ ಹುಟ್ಟಿ ಬೆಳೆದ ಮನೆ ಸರ್ಕಾರಿ ಶಾಲೆಯಾಗಿ ಇರುವ ಚಿತ್ರಗಳು ಹಾಗೂ ಈಗ ನಿರ್ಮಾಣ ಮಾಡಿರುವ ಡಿವಿಜಿ ಶಾಲೆಯನ್ನು ತೋರಿಸಿದರೆ ಯಾವ ರೀತಿ ಪ್ರತಿಕ್ರಿಯಿಸುತ್ತಿದ್ದರು, ಅದೇ ರೀತಿ ಕೆಜಿಎಫ್‌ನ ಬಿಜಿಎಂಎಲ್ ಹಾಗೂ ಕೆಜಿಎಫ್ ಸಿನಿಮಾ ತುಣುಕು ತೋರಿಸಿದಾಗ ಯಾವ ರೀತಿ ಮಾತನಾಡುತ್ತಿದ್ದರು ಎಂಬ ಅನುಕರಣೆ ಮಾಡಿ ತೋರಿಸಿದರು.

ಓಸ್ಸಾಟ್ ಸಂಸ್ಥೆಯ ಟ್ರಸ್ಟಿ ವಾದಿರಾಜ್ ಭಟ್ ಮಾತನಾಡಿ, ಓಸ್ಸಾಟ್ ಸಂಸ್ಥೆಯ ಇಂಜಿನಿಯರ್ ವಿಭಾಗದ ತಜ್ಞರು, ಡಿವಿಜಿ ಹುಟ್ಟಿ ಬೆಳೆದ ಸ್ಥಳದಲ್ಲಿದ್ದ ಸರ್ಕಾರಿ ಶಾಲೆಯ ಹಳೇ ಕಟ್ಟಡವಿದ್ದ ಸೀಮಿತ ಜಾಗದಲ್ಲಿ 10 ತರಗತಿ ಕೊಠಡಿ, 1 ಕಚೇರಿ, 1 ಸಿಬ್ಬಂದಿ ಕೊಠಡಿ ಸೇರಿದಂತೆ ಬಾಲಕ ಬಾಲಕಿಯರ ಪ್ರತ್ಯೇಕ ಶೌಚಾಲಯ ಸಂಕೀರ್ಣ, ಗೋದಾಮು, ಅಡುಗೆ ಮನೆ, ಸಭಾಂಗಣ ಚಟುವಟಿಕೆ ಒಳ ಮತ್ತು ಅಸೆಂಬ್ಲಿ ಸ್ಥಳದೊಂದಿಗೆ 3 ಅಂತಸ್ತಿನ ಅತ್ಯಾಧುನಿಕ ಕಣ್ಣಿಣ ಸೆಳೆಯುವ ಶೈಲಿಯ ಕಟ್ಟಡ ನಿರ್ಮಿಸಿದ್ದು, ಇದು ಡಿವಿಜಿ ಹೆಸರು ಉಳಿಸಲು ನೆರವಾಗುವ ಸ್ಮಾರಕವಾಗಿದೆ. ಎಲ್ಲಾ ಜನರಿಗೂ ಮುಕ್ತ ಪ್ರವೇಶ ಹೊಂದಿರುವಂತಹ ಡಿವಿಜಿ ಗ್ರಂಥಾಲಯ ಒಳಗೊಂಡ ಭವ್ಯ ಕಟ್ಟಡವಾಗಿದೆ. ಇದಕ್ಕೆ ಓಸ್ಸಾಟ್ ಸಂಸ್ಥೆಯ ಮಹಾದಾನಿಗಳ ನೆರವು ಅಮೂಲ್ಯವಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಇಂಚರ ಗೋವಿಂದ 'ರಾಜು, ಹಾಸ್ಯಕಲಾವಿದ ಗಂಗಾವತಿ ಪ್ರಾಣೇಶ್, ಬಸವರಾಜ್ ಮಹಾಮುನಿ, ಬಿಇಓ ಕೆ.ಆರ್.ಗಂಗರಾಮಯ್ಯ, ಶಾಲೆಯ ಮುಖ್ಯಶಿಕ್ಷಕ ಸಿ.ಸೊಣ್ಣಪ್ಪ, ಜಿಲ್ಲಾ ರಕ್ಷಣಾಧಿಕಾರಿ ಎಂ.ನಾರಾಯಣ, ತಹಸೀಲ್ದಾರ್ ಬಿ.ಆರ್.ಮುನಿವೆಂಕಟಪ್ಪ, ತಾ.ಪಂ. ಇ.ಓ ಡಾ.ಕೆ.ಸರ್ವೇಶ್, ಪೌರಾಯುಕ್ತ ವಿ.ಶ್ರೀ ಧರ್, ನಗರಸಭೆ ಸದಸ್ಯ ಎಸ್.ವೈ.ರಾಜಶೇಖರ್, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಶಂಕರಕೇಸರಿ, ಡಿವಿಜಿ ಕನ್ನಡ ಸಂಘದ ಅಧ್ಯಕ್ಷ ಮಧುಸೂಧನ ಇದ್ದರು.

ಮುಳಬಾಗಿಲು ನಗರದ ಕುಂಬಾರಪಾಳ್ಯ ಸರ್ಕಾರಿ ಡಿವಿಜಿ ಹಿರಿಯ ಪ್ರಾಥಮಿಕ ಶಾಲೆಯ ಸುಸಜ್ಜಿತ ಕಟ್ಟಡವನ್ನು ಗಣ್ಯರು ಲೋಕಾರ್ಪಣೆಗೊಳಿಸಿದರು.

> ಕಳೆದ 5 ವರ್ಷದಿಂದ ಗ್ರಾಮಗಳಿಗೆ ಭೇಟಿ ನೀಡಿದಾಗ ಹಳ್ಳಿಯ ಐದಾರು ದೇವಾಲಯಗಳ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡಬೇಕೆಂದು ಕೇಳುವವರು ಹೆಚ್ಚಾಗಿದ್ದಾರೆ, ಗ್ರಾಮಕ್ಕೆ ಒಂದು ಎರಡು ದೇವಾಲಯಗಳು ಇದ್ದರೆ ಚೆಂದ. ದೇವಾಲಯಗಳ ನಿರ್ಮಾಣದಿಂದ ಮುಂಭಾಗದಲ್ಲಿ ಭಿಕ್ಷುಕರನ್ನು ಹೆಚ್ಚು ಮಾಡುತ್ತೇವೆ, ಅದೇ ವೆಚ್ಚದಲ್ಲಿ ಶಾಲೆ ನಿರ್ಮಾಣ ಮಾಡಿದರೆ ಗ್ರಾಮದ ವಿದ್ಯಾರ್ಥಿಗಳು ಪ್ರತಿಭಾವಂತರಾಗಿ ಸಮಾಜಕ್ಕೆ ಸೇವೆ ಸಲ್ಲಿಸುವ ಅವಕಾಶ ಪಡೆಯುತ್ತಾರೆ, ಈ ಬಗ್ಗೆ ಹೆಚ್ಚು ಗಮನಹರಿಸಿ.
>
> • **ಸಮೃದ್ಧಿ ವಿ.ಮಂಜುನಾಥ್,** ಶಾಸಕ

> ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪ್ಪ ಮಕ್ಕಳಾದ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಡಿ.ವಿ.ಗುಂಡಪ್ಪ, ಬಿಜಿಎಲ್ ಸ್ವಾಮಿ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಮರವಾಗಿ ಉಳಿಯುತ್ತದೆ. ಡಿವಿಜಿ ಅವರ ಮಂಕುತಿಮ್ಮನ ಕಗ್ಗ 945 ಎಪಿಸೋಡ್‌ಗಳನ್ನು ತೋರಿಸುವಷ್ಟು ಆಗಾದವಾದ ಜ್ಞಾನವನ್ನು ಹೊಂದಿದೆ.
>
> • **ರಮೇಶ್ ಅರವಿಂದ್,** ಚಿತ್ರನಟ

ಡಿವಿಜಿ ನಿವಾಸದಲ್ಲಿನ ಶಾಲೆಗೆ ಹೊಸ ರೂಪ

ಡಿ.ವಿ.ಗುಂಡಪ್ಪನವರು ತಾವು ಹುಟ್ಟಿಬೆಳೆದ ಮನೆಯನ್ನು 1928ರಲ್ಲಿ ಸರ್ಕಾರಿ ಶಾಲೆಗೆ ಬಿಟ್ಟುಕೊಟ್ಟು ಬೆಂಗಳೂರಿನಲ್ಲಿ ನೆಲೆಸಿದ್ದರು. ಕನ್ನಡ ಸಂಘಟನೆಗಳ ಹೋರಾಟದ ಫಲವಾಗಿ ಅವರು ಹುಟ್ಟಿದ ಜಾಗದಲ್ಲಿ ಪ್ರಾರಂಭವಾದ ಶಾಲೆಗೆ ಅವರ ಹೆಸರನ್ನೇ ಇಡಲಾಗಿದೆ. ಇದೀಗ ಅವರ ಅಭಿಮಾನಿಗಳು ಒಟ್ಟಾಗಿ ಓಸಾಟ್ ಸಂಸ್ಥೆಯ ಮೂಲಕ ಶಾಲೆಗೆ ಹೊಸ ರೂಪ ಕೊಟ್ಟಿದ್ದಾರೆ.

ಸುದ್ದಿ ಸಿಂಚನ

ಕೆಜಿಎಫ್ ಮಕ್ಕಳ ಕಲ್ಯಾಣಾಧಿಕಾರಿಯಾಗಿ ರಾಜೇಶ್ ಅಧಿಕಾರ

ಕೆಜಿಎಫ್: ತಾಲೂಕಿನ ಶಿಶು ಅಭಿವೃದ್ಧಿ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯಾಗಿ ರಾಜೇಶ್ ಬುಧವಾರ ಅಧಿಕಾರ ವಹಿಸಿಕೊಂಡರು. ಬಳಿಕ ಮಾತನಾಡಿದ ಅವರು, ಕೆಜಿಎಫ್ ತಾಲೂಕಿನಲ್ಲಿ 292 ಅಂಗನವಾಡಿ ಕೇಂದ್ರಗಳಿದ್ದು, ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳ ಪರಿಶೀಲನೆ ನಡೆಸಲಾಗುವುದು, ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಸಿಗಬೇಕಾದ ಉತ್ತಮ ಪೌಷ್ಟಿಕಾಂಶವುಳ್ಳ ಆಹಾರ ಮಕ್ಕಳಿಗೆ ನೀಡುತ್ತಿರುವುದನ್ನು ಪರಿಶೀಲನೆ ನಡೆಸಲಾಗುವುದೆಂದು ತಿಳಿಸಿದರು. ಮಕ್ಕಳ ಆರೋಗ್ಯವೇ ದೇಶದ ಭವಿಷ್ಯ ಎಂಬ ದೂರದೃಷ್ಟಿಯ ಹಿನ್ನಲೆಯಲ್ಲಿ ಇಲಾಖೆಯು ಮಕ್ಕಳ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಜಾರಿಯಲ್ಲಿರುವ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಲಾಗುವುದು. ದೇಶದ ಮುಂದಿನ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಮಕ್ಕಳ ಅಭಿವೃದ್ಧಿ ಪೂರಕವಾಗಲಿದೆ ಎಂದರು.

ಅತಿಥಿ ಶಿಕ್ಷಕರನ್ನು ಸೇವಾ ಭದ್ರತೆ ಒದಗಿಸಿ ಕಾಯಂ ಮಾಡಿ: ನಂಜೇಗೌಡ

ಮಾಲೂರು: ರಾಜ್ಯದ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಸೇವಾ ಭದ್ರತೆ ಒದಗಿಸಿ ಖಾಯಂಗೊಳಿಸುವಂತೆ ಶಾಸಕ ಕೆ.ವೈ.ನಂಜೇಗೌಡ ಅವರು ಸದನದಲ್ಲಿ ಚುಕ್ಕಿ ಪ್ರಶ್ನೆಯ ಮೂಲಕ ಶಿಕ್ಷಣ ಸಚಿವರಿಗೆ ಮನವಿ ಮಾಡಿದರು. ಬೆಂಗಳೂರಿನ ವಿಧಾನಸೌಧದಲ್ಲಿ ನಡೆಯುತ್ತಿರುವ ಅಧಿವೇಶನದ ವಿಧಾನಸಭೆ ಸದನದಲ್ಲಿ ಮಾತನಾಡಿ ರಾಜ್ಯಾದ್ಯಂತ ಡಿಎಡ್, ಬಿಎಡ್, ಎಂಎಡ್ ಮಾಡಿರುವ 33,000ಕ್ಕೂ ಹೆಚ್ಚು ಅತಿಥಿ ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿ ಬಡವರು ಹಾಗೂ ಮಾಧ್ಯಮದ ವರ್ಗದ ಮಕ್ಕಳಿಗೆ ಬೋಧನೆ ಮಾಡುತ್ತಿದ್ದು, ಈ ಶಿಕ್ಷಕರಿಗೆ ಯಾವುದೇ ರೀತಿಯ ಸೇವಾ ಭದ್ರತೆ ಇರುವುದಿಲ್ಲ. ನಮ್ಮದೇ ಆದ ಕಾಂಗ್ರೆಸ್ ಪಕ್ಷದ ಸರ್ಕಾರವು ಈ ಹಿಂದೆ ಮುಖ್ಯಮಂತ್ರಿ, ಬಂಗಾರಪ್ಪ ಅವರು 10,000 ಅತಿಥಿ ಶಿಕ್ಷಕರಿಗೆ ಕೃಪಾಂಕ ನೀಡುವುದರ ಮೂಲಕ ಸೇವಾ ಭದ್ರತೆ ಒದಗಿಸಿ ಖಾಯಂಗೊಳಿಸಿದ್ದರು. ಸುಪ್ರೀಂ ಕೋರ್ಟ್ ಸಹ ಸಮಾನ ಕೆಲಸಕ್ಕೆ ಸಮಾನ ವೇತನ ಆದೇಶಿಸಿದೆ. ಅತಿಥಿ ಶಿಕ್ಷಕರಾಗಿ ಶಾಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ 12 ತಿಂಗಳಿಂದ ವೇತನ ಕೂಡ ಬಾಕಿ ಇದೆ. ಸರ್ಕಾರಿ ಶಾಲೆಗಳಲ್ಲಿ ಬಡವರು ಮಧ್ಯಮ ವರ್ಗದ ಮಕ್ಕಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿರುವುದರಿಂದ ಬೇರೆ ರಾಜ್ಯಗಳಲ್ಲಿ ಅತಿಥಿ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಿದಂತೆ ನಮ್ಮ ರಾಜ್ಯದಲ್ಲಿ ಸಹ ಅತಿಥಿ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಿ ಖಾಯಂಗೊಳಿಸಲು ಒತ್ತಾಯಿಸಿದರು. ಶಾಸಕರ ಪ್ರಶ್ನೆಗೆ ಉತ್ತರಿಸಿದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸದ್ಯಕ್ಕೆ ಅತಿಥಿ ಶಿಕ್ಷಕರನ್ನು ಸೇವಾ ದೃಢೀಕರಣಗೊಳಿಸಿ ಕಾಯಂ ಗೊಳಿಸುವ ವಿಷಯವು ಸರ್ಕಾರದ ಮುಂದೆ ಇಲ್ಲ ಆದ್ದರಿಂದ ಶಾಸಕರು ಸಹಕರಿಸುವಂತೆ ತಿಳಿಸಿದರು.

16 ಚಿನ್ನದ ಪದಕ ಬಾಚಿಕೊಂಡ ಧರಣಿಗೆ ಅಭಿನಂದನೆ

ಸಂಸದ ಎಸ್.ಮುನಿಸ್ವಾಮಿ ಅವರಿಂದ ಧರಣಿ ಎನ್.ಶೆಟ್ಟಿ, ತಂದೆ-ತಾಯಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಕೋಲಾರ

ತಾಲೂಕಿನಸುಗಟೂರು ಬಿಎಸ್ಸಿ ಪದವೀಧರೆ ಧರಣಿ ಎನ್. ಶೆಟ್ಟಿ ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ 16 ಚಿನ್ನದ ಪದಕಗಳನ್ನು ಪಡೆದು ಕೋಲಾರ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪದಕಗಳನ್ನು ಪ್ರದಾನ ಮಾಡಿದರು.

ತೋಟಗಾರಿಕೆ ಬಿಎಸ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದು ಬಾಗಲಕೋಟೆಯ ತೋಟಗಾರಿಕೆ ವಿವಿಗೆ ಮೊದಲ ರ‍್ಯಾಂಕ್ ಪಡೆದ ತಾಲೂಕಿನ ಸುಗಟೂರಿನಲ್ಲಿ ಚಿಕ್ಕ ಕಿರಾಣಿ ಅಂಗಡಿ ನಡೆಸುತ್ತಿರುವ ವರ್ತಕ ಟಿ.ಎನ್.ನಾಗೇಂದ್ರಶೆಟ್ಟಿ ಮತ್ತು ಸವಿತಾ ಎನ್.ಶೆಟ್ಟಿ ಹಿರಿಯಪುತ್ರಿ ಧರಣಿ ಎನ್. ಶೆಟ್ಟಿ 16 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ಧರಣಿ ಎನ್.ಶೆಟ್ಟಿ ಮೊದಲಿನಿಂದಲೂ ಓದು, ಆಟ, ಬರಹದಲ್ಲೂ ವಿಶೇಷ ವ್ಯಕ್ತಿತ್ವ ರೂಪಿಸಿಕೊಂಡಿದ್ದಾರೆ. ಕೋಲಾರದಲ್ಲಿ ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಣ ಪಡೆದ ಪ್ರತಿಭಾವಂತೆ ಧರಣಿ ಎನ್.ಶೆಟ್ಟಿ, ಎಸ್ಎಸ್ಎಲ್‌ಸಿಯಲ್ಲಿ ಶೇ.97, ದ್ವಿತೀಯ ಪಿಯುಸಿಯಲ್ಲಿ ಶೇ.95ರ ಪ್ಲಸ್ ಅಂಕಗಳಿಸಿದ್ದಾರೆ. ಪಿಯುಸಿ ಬಳಿಕ ವೈದ್ಯಕೀಯ ರಂಗಕ್ಕೆ ಪ್ರವೇಶ ಬಯಸಿದ್ದರು. ಅವರಿಗೆ ದಂತ ವೈದ್ಯಕೀಯದಲ್ಲಿ ಸೀಟು ಸಿಕ್ಕಾಗ ಅದಕ್ಕೆ ಪ್ರವೇಶ ಪಡೆಯದೇ ತೋಟಗಾರಿಕೆ ವಿಜ್ಞಾನದಲ್ಲಿ ಸೀಟು ಸಿಕ್ಕಿತ್ತು. ಹೀಗಾಗಿ ಮುನಿರಾಬಾದ್ ತೋಟಗಾರಿಕೆ ಕಾಲೇಜಿನಲ್ಲಿ ತೋಟಗಾರಿಕೆ ಬಿಎಸ್ಸಿ ಪದವಿಗೆ ಸೇರಿಕೊಂಡು ಇದೀಗ ಇಡೀ ತೋಟಗಾರಿಕೆ ವಿವಿಗೆ ಗೋಲ್ಡನ್ ಗರ್ಲ್ ಆಗಿ ಹೊರ ಹೊಮ್ಮಿದ್ದಾರೆ.

ಐಎಎಸ್ ಮಾಡುವಾಸೆ: ಮುಂದಿನ ದಿನಗಳಲ್ಲಿ ಸಾರ್ವಜನಿಕ ಸೇವೆ ಮಾಡುವ ಆಸೆಯೊಂದಿಗೆ ಬೆಂಗಳೂರಿನ ವಾಸವಿ ಕೋಚಿಂಗ್ ಸೆಂಟರ್‌ನಲ್ಲಿ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸುತ್ತಿರುವುದಾಗಿ ಹೇಳಿದ ಧರಣಿ ಎನ್.ಶೆಟ್ಟಿ 16 ಚಿನ್ನದ ಪದಕಗಳನ್ನು ತಂದೆ-ತಾಯಿ ಹಾಗೂ ಸುಗಟೂರಿನ ಗ್ರಾಮಸ್ಥರಿಗೆ ಅರ್ಪಿಸುವೆ ಎಂದು ಹೇಳಿದ್ದಾರೆ. ಧರಣಿ ಎನ್.ಶೆಟ್ಟಿ ತಂದೆ ಟಿ.ಎನ್. ನಾಗೇಂದ್ರಶೆಟ್ಟಿ ಮತ್ತು ತಾಯಿ ಸವಿತಾ ಎನ್.ಶೆಟ್ಟಿ ಅವರ ಮಗಳ ಸಾಧನೆಯನ್ನು ನೋಡಿ ಖುಷಿ ಪಟ್ಟಿದ್ದಾರೆ. ಮಗಳ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಂಡಿದ್ದೇವೆ. ಮೊದಲಿನಿಂದಲೂ ಓದಿನಲ್ಲಿ ಚುರುಕಾಗಿರುವ ಧರಣಿಗೆ ನಾವು ಯಾವುದೇ ಒತ್ತಡಗಳನ್ನು ಹಾಕಲಿಲ್ಲ. ಮುಂದಿನ ದಿನಗಳಲ್ಲಿ ಐಎಎಸ್ ಮಾಡುವ ಆಸೆಯನ್ನಿಟ್ಟುಕೊಂಡಿರುವುದರಿಂದ ಧರಣಿಗೆ ನಮ್ಮ ಕುಟುಂಬದವರು ಮತ್ತು ಸುಗಟೂರಿನ ಗ್ರಾಮಸ್ಥರು ಸಹಕಾರ ಇದ್ದೆ ಇರುತ್ತದೆ ಎಂದು ಹೇಳಿದರು.

ಬಿಎಸ್ಸಿ ಪದವೀಧರೆ ಧರಣಿ ಎನ್.ಶೆಟ್ಟಿ ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ 16 ಚಿನ್ನದ ಪದಕಗಳನ್ನು ಪಡೆದ ಸುದ್ದಿ ಗಮನಿಸಿದ ಸಂಸದ ಎಸ್. ಮುನಿಸ್ವಾಮಿ ಧರಣಿ ಎನ್.ಶೆಟ್ಟಿ ಹಾಗೂ ಅವರ ತಂದೆ-ತಾಯಿಯನ್ನು ಸನ್ಮಾನಿಸಿದರು. ಕೂಡಾ ಮಾಜಿ ಅಧ್ಯಕ್ಷ ವಿಜಯ ಕುಮಾರ್, ನಗರಸಭೆ ಮಾಜಿ ಉಪಾಧ್ಯಕ್ಷ ಪ್ರವೀಣ್‌ಗೌಡ, ಮುಖಂಡರಾದ ಅಪ್ಪಿ ನಾರಾಯಸ್ವಾಮಿ, ರಾಜೇಶ್‌ಸಿಂಗ್, ಸಂಪತ್, ಸಾಮಾ ಅನಿಲ್, ಸುಗಟೂರು ಬಿ.ಕೃಷ್ಣಪ್ಪ, ಚಲಪತಿ, ಭೂಪತಿಗೌಡ, ಶ್ರೀಗಂಧರಾಜೇಶ್, ಗ್ರಾಮಸ್ಥರಾದ ಶಿಕ್ಷಕ ರಮೇಶ್, ವೆಂಕಟಾಚಲ, ಸಿರಾಜ್‌ಸಾಬ್ ಇದ್ದರು.

ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ 16 ಚಿನ್ನದ ಪದಕ ಪಡೆದ ಬಿಎಸ್ಸಿ ಪದವೀಧರೆ ಧರಣಿ ಎನ್.ಶೆಟ್ಟಿರನ್ನು ಸಂಸದ ಎಸ್.ಮುನಿಸ್ವಾಮಿ ಸನ್ಮಾನಿಸಿದರು.

ಡಾ.ಬಾಬು ಜಗಜೀವನರಾಂ ಪುಣ್ಯ ಸ್ಮರಣೆ

ಚಿಕ್ಕಬಳ್ಳಾಪುರ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಇಂದು ಬೆಳಿಗ್ಗೆ 10:30 ಗಂಟೆಗೆ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ರವರ 37ನೇ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ನಗರದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಲಕ್ಷ್ಮಣ್ ರೆಡ್ಡಿ ತಿಳಿಸಿದ್ದಾರೆ.

ಪ್ರೌಢಶಾಲಾ ಸಹ ಶಿಕ್ಷಕರ ಸಂಘದಿಂದ ಬಿಇಓಗೆ ಮನವಿ

ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಅಕ್ಷರ ದಾಸೋಹ ಅಧಿಕಾರಿಯಾಗಿ ಮುಂದುವರೆಸಲು ಆಗ್ರಹ

• **ಕನ್ನಡಪ್ರಭ ವಾರ್ತೆ** ಮಾಲೂರು

ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಅಕ್ಷರ ದಾಸೋಹ ಅಧಿಕಾರಿ ಹುದ್ದೆಯಲ್ಲಿ ಮುಂದುವರಿಸುವಂತೆ ಒತ್ತಾಯಿಸಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ವತಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಕಲಾ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷೆ ಜಯಂತ